# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1530 (1795)
ಸದಸ್ಯರ ಹೆಸರು : ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 24.03.2020
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು.

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿರುವ ಪೌರಾಡಳಿತ ಇಲಾಖೆಯ ಅಡಿಯಲ್ಲಿ ಬರುವ ಸ್ಥಳೀಯ ಸಂಸ್ಥೆಗಳಿಗೆ ಬೇರೆ ಇಲಾಖೆಗಳಿಂದ "ಸಿ" ದರ್ಜೆಯ ನೌಕರರು ನಿಯೋಜನೆ ಮೇರೆಗೆ ಬಂದು ಆ ಸಂಸ್ಥೆಗಳ ಮುಖ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಅಂತಹ ನೌಕರರುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿ ಹುದ್ದೆಗಳಲ್ಲಿ ಬೇರೆ ಇಲಾಖೆಗಳ ಒಟ್ಟು 06 ಗ್ರೂಪ್ "ಸಿ" ನೌಕರರು ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ.<br><br>ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಈ ನಿಯೋಜನೆ ಎಷ್ಟು ವರ್ಷಗಳ ಅವಧಿಗೆಂದು ಷರತ್ತು ವಿಧಿಸಲಾಗಿದೆ; | ಈ ನಿಯೋಜನೆ ನೇಮಕಾತಿಗಳಿಗೆ ಕಾಲಾವಧಿಯನ್ನು ನಿಗದಿಪಡಿಸಿರುವುದಿಲ್ಲ. ಬದಲಾಗಿ, ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ನೌಕರರುಗಳನ್ನು ಯಾವುದೇ ಸಂದರ್ಭದಲ್ಲಿ ಹಾಗೂ ನೇರ ನೇಮಕಾತಿ/ಮುಂಬಡ್ತಿಯಿಂದ ಇಲಾಖೆಯ ಕೆ.ಎಂ.ಎ.ಎಸ್. ವೃಂದದ ಮುಖ್ಯಾಧಿಕಾರಿಗಳು ಲಭ್ಯವಾದ ಕೂಡಲೇ ಅವರ ಮಾತೃ ಇಲಾಖೆಗೆ ಹಿಂದಿರುಗಿಸಲಾಗುವುದು ಎಂದು ಷರತ್ತುಗಳನ್ನು ವಿಧಿಸಲಾಗಿದೆ. |
| ಇ) | ಈ ಸಂಸ್ಥೆಗಳಲ್ಲಿ ಸುಮಾರು 10 ರಿಂದ 15 ಕೋಟಿ ರೂಪಾಯಿಗಳ ಅನುದಾನವನ್ನು ವ್ಯಯಿಸುವ ಅಧಿಕಾರವಿರುವುದರಿಂದ ಕನಿಷ್ಟ ಪಕ್ಷ ಆ ಸಂಸ್ಥೆಗಳಿಗೆ ದ್ವಿತೀಯ ದರ್ಜೆ ಗುಮಾಸ್ತ, ಆರೋಗ್ಯ ನಿರೀಕ್ಷಕ, ರೆಕಾರ್ಡ್ ಕೀಪರ್ ಇನ್ನು ಮುಂತಾದ ಇದೇ ದರ್ಜೆಯ ನೌಕರರನ್ನು ಮುಖ್ಯಾಧಿಕಾರಿಯಾಗಿ ನೇಮಕ ಮಾಡುವುದು ಸರಿಯಾದ ಕ್ರಮವೇ; | ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿನ ಮುಖ್ಯಾಧಿಕಾರಿಗಳ ಹುದ್ದೆಗೆ ಇಲಾಖೆಯ ಕೆ.ಎಂ.ಎ.ಎಸ್. ಅಧಿಕಾರಿಗಳ ಕೊರತೆಯಿಂದಾಗಿ ಅನ್ಯ ಇಲಾಖೆಯ ನೌಕರರುಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಕೆ.ಎಂ.ಎ.ಎಸ್. ವೃಂದದ ಅಧಿಕಾರಿಗಳನ್ನು ಅವರುಗಳ ಜಾಗಕ್ಕೆ ನೇಮಿಸಿ, ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅನ್ಯ ಇಲಾಖೆಯ ಅಧಿಕಾರಿ/ನೌಕರರುಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಕುರಿತು ಪರಿಶೀಲಿಸಲಾಗುವುದು. |
| ಈ) | ಹಾಗಿದ್ದಲ್ಲಿ, ಈ ಸಂಸ್ಥೆಗಳ ಮುಖ್ಯಾಧಿಕಾರಿಗಳ ಹುದ್ದೆಗೆ ಇಲಾಖೆಯಲ್ಲಿರುವ ಸಹಾಯಕ ನಿರ್ದೇಶಕರು, ಉಪ ತಹಶೀಲ್ದಾರ್ ಅಥವಾ ಇದೇ ವೃಂದದ ಬೇರೆ ಇಲಾಖೆಯವರನ್ನು ನೇಮಕ ಮಾಡಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ? | ಸಹಾಯಕ ನಿರ್ದೇಶಕರು, ಉಪ ತಹಶೀಲ್ದಾರ್ ಅಥವಾ ಇದೇ ವೃಂದದ ಬೇರೆ ಇಲಾಖೆಯವರನ್ನು ಮುಖ್ಯಾಧಿಕಾರಿ ಹುದ್ದೆಗೆ ನೇಮಕ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

**ಸಂಖ್ಯೆ: ನಅಇ 16 ಎಲ್‌ಸಿಕ್ಯೂ 2020**

(ನಾರಾಯಣಗೌಡ)
ಪೌರಾಡಳಿತ ಹಾಗೂ ತೋಟಗಾರಿಕೆ
ಮತ್ತು ರೇಷ್ಮೆ ಸಚಿವರು.

# ಅನುಬಂಧ

| ಕ್ರ ಸಂ | ಜಿಲ್ಲೆಯ ಹೆಸರು | ನಗರ ಸ್ಥಳೀಯ ಸಂಸ್ಥೆ ಹೆಸರು | ಮುಖ್ಯಾಧಿಕಾರಿ ಹೆಸರು | ಮಾತೃ ಇಲಾಖೆಯ ಹೆಸರು |
|---|---|---|---|---|
| 1 | ಕೋಲಾರ | ಪುರಸಭೆ, ಮಾಲೂರು | ಶ್ರೀ ಎಸ್.ಪ್ರಸಾದ್ | ಸಾಂಖ್ಯಿಕ ಇಲಾಖೆ |
| 2 | ತುಮಕೂರು | ಪುರಸಭೆ, ಕುಣಿಗಲ್ | ಶ್ರೀ ರಮೇಶ್ ಆರ್. | ವೈದ್ಯಕೀಯ ಶಿಕ್ಷಣ |
| 3 | ಕೊಡಗು | ಪಟ್ಟಣ ಪಂಚಾಯತಿ, ವಿರಾಜಪೇಟೆ | ಶ್ರೀ ಶ್ರೀಧರ್ | ಲೋಕೋಪಯೋಗಿ ಇಲಾಖೆ |
| 4 | ಚಿಕ್ಕಮಗಳೂರು | ಪುರಸಭೆ, ಕಡೂರು | ಶ್ರೀ ಹೆಚ್.ಎನ್.ಮಂಜುನಾಥ್ | ಕೆ.ಎಸ್.ಎಫ್.ಸಿ. |
| 5 | ಉತ್ತರ ಕನ್ನಡ | ಪುರಸಭೆ, ಕುಮಟಾ | ಶ್ರೀ ಸುರೇಶ್.ಎಂ.ಕೆ. | ಉದ್ಯೋಗ ಮತ್ತು ತರಬೇತಿ ಇಲಾಖೆ. |
| 6 | ಬಳ್ಳಾರಿ | ಪುರಸಭೆ, ಹರಪನಹಳ್ಳಿ | ಶ್ರೀ ನಾಗರಾಜ ನಾಯ್ಕ.ಬಿ.ಆರ್. | ಯೋಜನೆ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ |

**ಸಂಖ್ಯೆ:ನಅಇ 16 ಎಲ್‌ಸಿಕ್ಯೂ 2020**

AVijayakumar
(ಎ.ವಿಜಯಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.